ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 09-01-1993.

# *ಅವ್ಯಕ್ತ ವರ್ಷ ಆಚರಿಸಿಕೊಳ್ಳುವುದು ಅರ್ಥಾತ್ ಸುಪುತ್ರರಾಗಿ ತೋರಿಸುವುದು*

(अव्यक्त वर्ष मनाना अर्थात् सपूत बन सबूत देना)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಬ್ರಹ್ಮಾತಂದೆಯ ಸಮಾನವಾಗಿ ಅವ್ಯಕ್ತ ಫರಿಶ್ತಾರಾಗುವ ಉತ್ಸಾಹ ಉಲ್ಲಾಸಗಳಿಂದ ಇರುವ ಮಕ್ಕಳೊಂದಿಗೆ ಅವ್ಯಕ್ತ ಬಾಪ್‌ದಾದಾ ಮಾತನಾಡುತ್ತಿದ್ದಾರೆ.**

ಇಂದು ಅವ್ಯಕ್ತ ತಂದೆ ತನ್ನ ಅವ್ಯಕ್ತ ಮೂರ್ತಿ ಮಕ್ಕಳೊಂದಿಗೆ ಮಿಲನವನ್ನು ಆಚರಿಸುತ್ತಿದ್ದಾರೆ. ಅವ್ಯಕ್ತ ಅರ್ಥಾತ್ ವ್ಯಕ್ತ ಭಾವದಿಂದ ಅತೀತ ಹಾಗೂ ಅವ್ಯಕ್ತತಂದೆಯ ಸಮಾನವಾಗಿ ಪ್ರಿಯವಾಗಿರುವುದು. ಎಲ್ಲಾ ಮಕ್ಕಳು ವಿಶೇಷವಾಗಿ ಈ ವರ್ಷ ಈ ರೀತಿ ತಂದೆಯ ಸಮಾನರಾಗುವ ಲಕ್ಷ್ಯವನ್ನು ಇಟ್ಟುಕೊಳ್ಳುತ್ತಾ ಯಥಾಶಕ್ತಿ ಬಹಳ ಚೆನ್ನಾಗಿ ಪುರುಷಾರ್ಥ ಮಾಡುತ್ತಿದ್ದಾರೆ. ಲಕ್ಷ್ಯದ ಜೊತೆ ಲಕ್ಷಣವೂ ಧಾರಣೆ ಮಾಡುತ್ತಾ ನಡೆಯುತ್ತಿದ್ದಾರೆ ಬಾಪ್‌ದಾದಾರವರು ಎಲ್ಲಾ ಮಕ್ಕಳ ಪುರುಷಾರ್ಥವನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಪ್ರತಿಯೊಬ್ಬರು ಸಮಾನರಾಗುವುದೇ ಸ್ನೇಹದ ಸಾಕ್ಷಿಯಾಗಿದೆ ಎಂದು

ತಿಳಿದುಕೊಂಡಿದ್ದಾರೆ. ಆದ್ದರಿಂದ ಈ ರೀತಿ ಸಾಕ್ಷಿ ಕೊಡುವಂತಹ ಮಕ್ಕಳನ್ನೇ ಸುಪುತ್ರ ಮಕ್ಕಳೆಂದು ಹೇಳಲಾಗುತ್ತದೆ. ಸುಪುತ್ರ ಮಕ್ಕಳನ್ನು ನೋಡಿ ಬಾಪ್ -ದಾದಾರವರು ಖುಷಿಪಡುತ್ತಾರೆ ಹಾಗೂ ವಿಶೇಷವಾದ ಹೆಚ್ಚಿನ ಸಹಯೋಗವನ್ನು ಕೊಡುತ್ತಾರೆ.

ಎಷ್ಟು ಧೈರ್ಯವಂತರಾಗುತ್ತೀರೋ ಅಷ್ಟು ಪದಮದಷ್ಟು ಸ್ವತಃವಾಗಿಯೇ ತಂದೆಯ ಸಹಯೋಗದ ಪಾತ್ರರಾಗುತ್ತೀರಿ. ಇಂತಹ ಪಾತ್ರರಾಗಿರುವ ಮಕ್ಕಳ ಚಿಹ್ನೆ ಏನಾಗಿರುತ್ತದೆ. ಹೇಗೆ ತಂದೆಗಾಗಿ ಗಾಯನವು(ಮಹಿಮೆ) ತಂದೆಯ ಭಂಡಾರ ಸದಾ ಭರ್‌ಪೂರ್ ಆಗಿದೆ ಎಂದು ಇದೆಯೋ ಹಾಗೆಯೇ ಸುಪುತ್ರ ಮಕ್ಕಳು ಸದಾ ಸರ್ವರ ಹೃದಯದ ಸ್ನೇಹದ ಆಶೀರ್ವಾದದಿಂದ, ಸರ್ವರ ಸಹಯೋಗದ ಅನುಭೂತಿಗಳಿಂದ, ಸರ್ವ ಖಜಾನೆಗಳ ಭಂಡಾರದಿಂದ ಭರ್‌ಪೂರ್ ಆಗಿರುತ್ತಾರೆ. ಯಾವುದೇ ಖಜಾನೆಗಳಿಂದ ತಮ್ಮನ್ನು ಖಾಲಿ ಎಂಬ ಅನುಭವ ಮಾಡುವುದಿಲ್ಲ. ಸದಾ ಅವರ ಹೃದಯದಿಂದ ಸ್ವತಃವಾಗಿ "ತಂದೆಯ ಮಕ್ಕಳಾದ ನಮ್ಮ ಭಂಡಾರದಲ್ಲಿ ಅಪ್ರಾಪ್ತಿಯಾಗುವ ಯಾವುದೇ ವಸ್ತು ಇಲ್ಲ" ಎಂಬ ಗೀತೆಯು ಮೊಳಗುತ್ತಿರುತ್ತದೆ. ಅವರ ದೃಷ್ಟಿಯಿಂದ, ವೃತ್ತಿಯಿಂದ, ವೈಬ್ರೇಷನ್ಸ್ ನಿಂದ, ಮುಖದಿಂದ, ಸಂಪರ್ಕದಿಂದ ಸದಾ ಭರ್‌ಪೂರ್ ಆತ್ಮನ ಅನುಭವವಾಗುತ್ತದೆ. ಇಂತಹ ಮಕ್ಕಳು ಸದಾ ತಂದೆಯ ಜೊತೆಯೂ ಇದ್ದಾರೆ ಹಾಗೂ ಜೊತೆಗಾರರೂ ಆಗಿದ್ದಾರೆ. ಈ ಡಬಲ್ ಅನುಭವ ಆಗಲಿ, ಸ್ವಯಂನ ಲಗನ್ನಿನಲ್ಲಿ ಸದಾ ಜೊತೆಯ ಅನುಭವ ಮಾಡುತ್ತಾ ಹಾಗೂ ಸೇವೆಯಲ್ಲಿ ಸದಾ ಜೊತೆಗಾರನ ಸ್ಥಿತಿಯ ಅನುಭವ ಮಾಡುತ್ತಾ ಇರಿ. ಈ ಎರಡೂ ಅನುಭವ ''ಜೊತೆ ಹಾಗೂ ಜೊತೆಗಾರ" ಸ್ವತಃವಾಗಿಯೇ ತಂದೆಯ ಸಮಾನ ಸಾಕ್ಷಿ ಅರ್ಥಾತ್ ಅತೀತ ಹಾಗೂ ಅತಿಪ್ರಿಯರನ್ನಾಗಿ ಮಾಡಿ ಬಿಡುತ್ತದೆ. ಹೇಗೆ ಬ್ರಹ್ಮಾತಂದೆಯನ್ನು ನೋಡಿದಿರಿ – ತಂದೆ ಹಾಗೂ ತಾವು ಕಂಬೈಂಡ್ ರೂಪದಲ್ಲಿ ಸದಾ ಅನುಭವ ಮಾಡಿದಿರಿ ಹಾಗೂ ಮಾಡಿಸಿದಿರಿ, ಕಂಬೈಂಡ್ ಸ್ವರೂಪವನ್ನು ಬೇರೆ ಯಾರೂ ಅನುಭವ ಮಾಡಲು ಸಾಧ್ಯವಿಲ್ಲ. ಇಂತಹ ಸುಪುತ್ರ ಮಕ್ಕಳು ಸದಾ ತಮ್ಮನ್ನು ತಾವು ಕಂಬೈಂಡ್ ರೂಪದ ಅನುಭವ ಮಾಡುತ್ತಾರೆ. ಅವರನ್ನು ಬೇರೆ ಮಾಡಲು ಯಾವ ಶಕ್ತಿಗೂ ಸಾಧ್ಯವಿಲ್ಲ. ಹೇಗೆ ಸತ್ಯಯುಗದಲ್ಲಿ ಪ್ರಕೃತಿಯು ದೇವತೆಯರ ದಾಸಿಯಾಗಿರುತ್ತದೆ ಅರ್ಥಾತ್ ಸದಾ ಸಮಯ ಪ್ರಮಾಣ ಸಹಯೋಗ ನೀಡುತ್ತಿರುತ್ತದೆ. ಇಂತಹ ಸುಪುತ್ರ ಮಕ್ಕಳ ಶ್ರೇಷ್ಠ ಸ್ಥಿತಿಯ ಕಾರಣ ಸರ್ವಶಕ್ತಿಗಳು ಹಾಗೂ ಸರ್ವ ಗುಣಗಳು ಸಮಯ ಪ್ರಮಾಣ ಸದಾ ಸಹಯೋಗಿಯಾಗಿರುತ್ತವೆ ಅರ್ಥಾತ್ ಸರ್ವಶಕ್ತಿಗಳ, ಗುಣಗಳ ರಾಜ್ಯಾಧಿಕಾರಿಯಾಗಿರುತ್ತೀರಿ. ಜೊತೆಜೊತೆ ಇಂತಹ ಸುಪುತ್ರ ಮಕ್ಕಳ ಸೇವೆಯ ವಿಶೇಷ ಸ್ವರೂಪ ಏನಾಗಿರುತ್ತದೆ? ಎಲ್ಲಾ ವಾಣಿಯ ಮೂಲಕ ಅಥವಾ ಮನಸಾ ಸೇವೆಯ ಮೂಲಕ ಸೇವೆಯನ್ನು ಮಾಡುತ್ತಾರೆ. ಇಂತಹ ಸೇವೆ ಅವರೂ ಸಹ ಮಾಡುತ್ತಾರೆ ಆದರೆ ಅವರ ವಿಶೇಷ ಸೇವೆ ಇದಾಗಿರುತ್ತದೆ. -ಸದಾ ತಮಗೆ ಪ್ರಾಪ್ತವಾಗಿರುವ ತಂದೆಯ ಗುಣಗಳು ಹಾಗೂ ಶಕ್ತಿಗಳ ದಾನವಲ್ಲ ಆದರೆ ಸಹಯೋಗ ಹಾಗೂ ಪ್ರಾಪ್ತಿಗಳ ಅನುಭೂತಿಯನ್ನು ಅನ್ಯ ಆತ್ಮರಿಗೆ ಮಾಡಿಸುವುದು. ಅಜ್ಞಾನಿಗಳಿಗೆ ದಾನ ಕೊಡುತ್ತಾರೆ ಹಾಗೂ ಬ್ರಾಹ್ಮಣ ಆತ್ಮರಿಗೆ ಸಹಯೋಗ ಹಾಗೂ ಪ್ರಾಪ್ತಿ ಮಾಡಿಸುತ್ತಾರೆ. ಏಕೆಂದರೆ ಎಲ್ಲದಕ್ಕಿಂತ ಅತೀ ದೊಡ್ಡ ದಾನ ಗುಣ ದಾನ ಹಾಗೂ ಶಕ್ತಿಗಳ ದಾನವಾಗಿದೆ.

**ನಿರ್ಬಲರನ್ನು ಶಕ್ತಿವಂತರನ್ನಾಗಿ(ಬಲವುಳ್ಳವರನ್ನಾಗಿ) ಮಾಡುವುದು ಇದು ಶ್ರೇಷ್ಠ ದಾನ ಹಾಗೂ ಸಹಯೋಗವಾಗಿದೆ.** ಇಂತಹ ಸಹಯೋಗ ಕೊಡುವುದು ಬರುತ್ತದೆಯೇ? ಅಥವಾ ಈಗಲೂ ಪಡೆಯುವುದನ್ನೇ ಯೋಚನೆ ಮಾಡುತ್ತಿರುತ್ತೀರಾ? ಇದುವರೆಗೂ ತೆಗೆದುಕೊಳ್ಳುವವರೇ ಆಗಿದ್ದೀರಾ ಅಥವಾ ದಾತಾನ ಮಕ್ಕಳು ದಾನ ಮಾಡುವವರಾಗಿದ್ದೀರಾ? ಅಥವಾ ಕೆಲವೊಮ್ಮೆ ತೆಗೆದುಕೊಳ್ಳುವವರು, ಕೆಲವೊಮ್ಮೆ ಕೊಡುವವರು ಈ ರೀತಿ ಇದ್ದೀರಾ? ಕೂಡಲು ಶುರು ಮಾಡಿದರೆ ತೆಗೆದುಕೊಳ್ಳುವುದರಲ್ಲಿ ಸ್ವತಃವಾಗಿಯೇ ಸಂಪನ್ನರಾಗಿ ಆಗುವಿರಿ. ಏಕೆಂದರೆ ತಂದೆ ಎಲ್ಲರಿಗೂ ಎಲ್ಲವನ್ನು ಕೊಟ್ಟು ಬಿಟ್ಟದ್ದಾರೆ. ಎನನ್ನೂ ತನ್ನ ಹತ್ತಿರ ಇಟ್ಟುಕೊಂಡಿಲ್ಲ ಎಲ್ಲವನ್ನು ಕೊಟ್ಟು ಬಿಟ್ಟಾಗ ಕೇವಲ ಪಡೆದವರಿಗೆ ಸಂಭಾಲನೆ ಮಾಡಲು ಹಾಗು ಕಾರ್ಯದಲ್ಲಿ ತೊಡಗಿಸಲು ಬರುತ್ತಿಲ್ಲ. ಎಷ್ಟು ಕೊಡುತ್ತಾ ಹೋಗುತ್ತೀರೋ ಅಷ್ಟೇ ಸಂಪನ್ನತೆಯ ಅನುಭವ ಮಾಡುತ್ತೀರಿ. ಈ ರೀತಿಯ ಸುಪುತ್ರರಾಗಿದ್ದೀರಲ್ಲವೇ? 'ಸುಪುತ್ರ'ರ ಲೈನಿನಲ್ಲಿ ಇದ್ದೀರಾ? ಅಥವಾ "ಸುಪುತ್ರರಾಗುವ" ಲೈನಿನಲ್ಲಿದ್ದಾರಾ? ಹೇಗೆ ಲೌಕಿಕದಲ್ಲಿ ಸಹ ತಂದೆ-ತಾಯಿ ತಮ್ಮ ಮಕ್ಕಳನ್ನು ತಮ್ಮ ಕೈಗಳಿಂದ ಮೇಲೆ ಹಾರಿಸಿ ಕುಣಿಸುತ್ತಿರುತ್ತಾರೆ. ಅರ್ಥಾತ್ ಸದಾ ಖುಷಿಯಾಗಿಡುತ್ತಾರೆ. ಉತ್ಸಾಹ-ಉಲ್ಲಾಸದಲ್ಲಿಡುತ್ತಾರೆ. ಇಂತಹ ಸುಪುತ್ರ ಮಕ್ಕಳು ಸದಾ ಸರ್ವರನ್ನು 'ಉತ್ಸಾಹ-ಉಲ್ಲಾಸದಲ್ಲಿ ನರ್ತನೆ ಮಾಡಿಸುತ್ತಾ ಇರುತ್ತಾರೆ. ಹಾರುವ ಕಲೆಯಲ್ಲಿ ಹಾರಿಸುತ್ತಿರುತ್ತಾರೆ. ಎಂದ ಮೇಲೆ ಈ ವರ್ಷ ಅವ್ಯಕ್ತ ವರ್ಷವನ್ನು ಆಚರಿಸುತ್ತಿದ್ದೀರಿ. ಅವ್ಯಕ್ತ ವರ್ಷ ಆಚರಿಸುವುದು ಎಂದರೆ ತಂದೆಯ ಸುಪುತ್ರರಾಗಿ ಸಾಕ್ಷಿಯನ್ನು ಕೊಡುವವರಾಗುವುದು. ಈ ರೀತಿ ಸಾಕ್ಷಿ ಕೊಡುವುದು ಅರ್ಥಾತ್ ಆಚರಿಸುವುದು. **ಅವ್ಯಕ್ತದ ಅರ್ಥವಾಗಿದೆ ವ್ಯಕ್ತ ಭಾವ ಹಾಗೂ ವ್ಯಕ್ತ ಭಾವನೆಯಿಂದ ಅತೀತ.**

ಜೀವನದಲ್ಲಿ ಹಾರುವ ಕಲೆಯ ಹಾಗೂ ಇಳಿಯುವ ಕಲೆಯ ಆಧಾರ 2 ಮಾತುಗಳಾಗಿವೆ - 1. ಭಾವನೆ ಹಾಗು 2. ಭಾವ. ಒಂದು ವೇಳೆ ಯಾವುದೇ ಕಾರ್ಯದಲ್ಲಿ ಕಾರ್ಯದ ಪ್ರತಿ ಅಥವಾ ಕಾರ್ಯ ಮಾಡಿಸುವಂತಹ ವ್ಯಕ್ತಿಯ ಪ್ರತಿ ಭಾವನೆ ಶ್ರೇಷ್ಠವಾಗಿದ್ದಲ್ಲಿ ಭಾವನೆಯ ಫಲವೂ ಸ್ವತಃವಾಗಿಯೇ ಶ್ರೇಷ್ಠವಾಗಿರುತ್ತದೆ. 1.ಸರ್ವರ ಪ್ರತಿ ಕಲ್ಯಾಣದ ಭಾವನೆ. 2.ಯಾರೇ ಹೇಗೆ ಇರಲಿ ಆದರೆ ಸದಾ ಸ್ನೇಹ ಹಾಗೂ ಸಹಯೋಗ ನೀಡುವ ಭಾವನೆ 3.ಸದಾ ಧೈರ್ಯ - ಉಲ್ಲಾಸವನ್ನು ಹೆಚ್ಚಿಸುವ ಭಾವನೆ; 4.ಯಾರೇ ಹೇಗೆ ಇರಲಿ ಆದರೆ ಸದಾ ತನ್ನತನದ ಭಾವನೆ ಹಾಗೂ 5.ಈ ಎಲ್ಲದರ ಬುನಾದಿಯು ಆತ್ಮಿಕ ಸ್ವರೂಪದ ಭಾವನೆಯಾಗಿದೆ. ಇದಕ್ಕೆ ಹೇಳಲಾಗುತ್ತದೆ ಸದ್ಭಾವನೆಗಳು ಹಾಗೂ ಶುಭಭಾವನೆಗಳು. ಅವ್ಯಕ್ತ ಆಗುವುದು ಅರ್ಥಾತ್ ಈ ಎಲ್ಲಾ ಶುಭಭಾವನೆಗಳನ್ನು ಇಟ್ಟುಕೊಳ್ಳುವುದು. ಒಂದು ವೇಳೆ ಈ ಶುಭಭಾವನೆಗಳ ವಿರುದ್ಧವಿದ್ದರೆ ವ್ಯಕ್ತ ಭಾವ ತನ್ನ ಕಡೆಗೆ ಆಕರ್ಷಣೆ ಮಾಡುವುದು. ವ್ಯಕ್ತ ಭಾವದ ಅರ್ಥವೇ ಆಗಿದೆ ಈ 5 ಮಾತುಗಳಿಗೆ ವಿರುದ್ಧವಾಗಿರುವುದು. ಇದರ ವಿರುದ್ಧವನ್ನಂತೂ ಸ್ವಯಂ ತಿಳಿದುಕೊಂಡಿದ್ದೀರಿ, ವರ್ಣನೆ ಮಾಡುವ ಅವಶ್ಯಕತೆ ಇಲ್ಲ. ಯಾವಾಗ ಭಾವನೆ ವಿರುದ್ಧವಾಗುತ್ತದೆಯೋ ಆಗ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಲು ಸಾಧ್ಯವಿಲ್ಲ.

ಮಾಯೆಯು ಬರುವ ವಿಶೇಷವಾದ ಬಾಗಿಲು ಇದೇ ಆಗಿದೆ. ಯಾವುದೇ ವಿಘ್ನವನ್ನು ಚೆಕ್ ಮಾಡಿ ಅದರ ಮೂಲ ಪ್ರೀತಿಯ ಬದಲಾಗಿ ವಿರುದ್ಧ(ವಿಪರೀತ) ಭಾವನೆಗಳೇ ಆಗಿರುತ್ತವೆ ಭಾವನೆ ಮೊದಲು ಸಂಕಲ್ಪ ರೂಪದಲ್ಲಿ ಇರುತ್ತದೆ ನಂತರ ಮಾತಿನಲ್ಲಿ ಬರುತ್ತದೆ ತದನಂತರ ಮತ್ತೆ! ಕರ್ಮದಲ್ಲಿ ಬರುತ್ತದೆ ಹೇಗೆ ಭಾವನೆ ಇರುತ್ತದೆಯೋ ಹಾಗೆಯೇ ವ್ಯಕ್ತಿಗಳ

ಪ್ರತಿಯೊಂದು ಚಲನೆ ಹಾಗೂ ಮಾತುಗಳನ್ನು ಅದೇ ಭಾವದಲ್ಲಿ ನೋಡುತ್ತಾರೆ. ಕೇಳುತ್ತಾರೆ ಹಾಗೂ ಸಂಬಂಧದಲ್ಲಿ ಬರುತ್ತಾರೆ. ಭಾವನೆಯಿಂದ ಭಾವವೂ ಸಹ ಬದಲಾಗುತ್ತದೆ. ಒಂದು ವೇಳೆ ಯಾವುದೇ ಆತ್ಮನ ಪ್ರತಿ ಯಾವುದೇ ಸಮಯ ಈರ್ಷ್ಯೆಯ ಭಾವನೆ ಇದ್ದರೆ ಅರ್ಥಾತ್ ನಮ್ಮವರು ಎಂಬ ಭಾವನೆ ಇಲ್ಲವಾದರೆ ಆ ವ್ಯಕ್ತಿಯ ಪ್ರತಿಯೊಂದು ಚಲನೆ, ಪ್ರತಿಯೊಂದು ಮಾತಿನಿಂದ ತಪ್ಪು ತಿಳುವಳಿಕೆಯ (ಮಿಸ್‌ಅಂಡರ್ ಸ್ಟಾಂಡ್) ಭಾವ ಅನುಭವವಾಗುತ್ತದೆ ಅವರು ಒಳ್ಳೆಯದೇ ಮಾಡುವರು ಆದರೆ ನಿಮ್ಮ ಭಾವನೆ ಒಳ್ಳೆಯದಿಲ್ಲದಿರುವ ಕಾರಣ ಪ್ರತಿ ಚಲನೆ ಹಾಗೂ ಮಾತಿನಲ್ಲಿ ನಿಮಗೆ ಕೆಟ್ಟ ಭಾವವೇ ಕಾಣಿಸಿಕೊಳ್ಳುವುದು. ಭಾವನೆ' ಭಾವವನ್ನು ಬದಲಾವಣೆ ಮಾಡುವುದಾಗಿದೆ ಚೆಕ್ ಮಾಡಿ - ಪ್ರತಿಯೊಂದು ಆತ್ಮನ ಪ್ರತಿ ಶುಭ ಭಾವನೆ, ಶುಭ ಭಾವ ಇರುತ್ತದೆಯೇ ಎಂದು? ಭಾವವನ್ನು ತಿಳಿದುಕೊಳ್ಳುವುದರಲ್ಲಿ ಅಂತರ ಆಗುವುದರಿಂದ 'ಮಿಸ್ ಅಂಡರ್ ಸ್ಟ್ಯಾಂಡಿಂಗ್' ಮಾಯೆಯ ದ್ವಾರವಾಗಿ ಬಿಡುವುದು. ಅವ್ಯಕ್ತ ಸ್ಥಿತಿಯನ್ನು ತಯಾರು ಮಾಡಿಕೊಳ್ಳಲು ವಿಶೇಷ ತಮ್ಮ ಭಾವನೆ ಹಾಗೂ ಭಾವವನ್ನು ಚೆಕ್ ಮಾಡಿ ಆಗ ಸಹಜ ಅವ್ಯಕ್ತ ಸ್ಥಿತಿಯ ವಿಶೇಷ ಅನುಭವ ಮಾಡುತ್ತಿರುತ್ತೀರಿ.

ಕೆಲವು ಮಕ್ಕಳು ಅಶುದ್ಧ ಭಾವನೆ ಹಾಗೂ ಅಶುಭ ಭಾವದಿಂದ ಭಿನ್ನರಾಗಿರುತ್ತಾರೆ. ಆದರೆ 1.ಒಂದಾಗಿದೆ ಶುಭ ಭಾವ ಹಾಗು ಭಾವನೆ 2.ಎರಡನೆಯದಾಗಿದೆ ವ್ಯರ್ಥ ಭಾವ ಹಾಗೂ ಭಾವನೆ 3.ಮೂರನೆಯದಾಗಿದೆ ಸಾಧಾರಣ ಭಾವ ಹಾಗೂ ಭಾವನೆ ಏಕೆಂದರೆ ಬ್ರಾಹ್ಮಣ ಅರ್ಥಾತ್ ಸೇವಾ ಭಾವ, ಸಾಧಾರಣ ಭಾವನೆ ಅಥವಾ ಸಾಧಾರಣ ಭಾವ ಹಾನಿ ಮಾಡುವುದಿಲ್ಲ ಆದರೆ ಬ್ರಾಹ್ಮಣ ಜೀವನದ ಕರ್ತವ್ಯವಾಗಿದೆ ಶುಭ ಭಾವನೆಯಿಂದ ಸೇವಾ ಭಾವ, ಇದನ್ನು ಮಾಡಲಾಗುವುದಿಲ್ಲ. ಆದ್ದರಿಂದಲೇ ಬ್ರಾಹ್ಮಣ ಜೀವನದಲ್ಲಿ ಸೇವೆಯ ಫಲವೇನೋ ಜಮಾ ಆಗುವ ವಿಶೇಷ ವರದಾನವಿದೆ ಆದರೆ ಅನುಭವ ಮಾಡಲು ಆಗುವುದಿಲ್ಲ. ಸಾಧಾರಣ ಭಾವ ಹಾಗೂ ಭಾವನೆಯನ್ನು ಶ್ರೇಷ್ಠ ಭಾವನೆ, ಶ್ರೇಷ್ಠ ಭಾವದಲ್ಲಿ ಪರಿವರ್ತನೆ ಮಾಡಿಕೊಳ್ಳಿ, ಚೆಕ್ ಮಾಡಿ ಕೊಂಡರೆ ಆಗ ಚೇಂಜ್ ಮಾಡಿಕೊಳ್ಳುತ್ತೀರಿ ಹಾಗೂ ತಂದೆಯ ಸಮಾನ ಹಾಗೂ ಸಹಜವಾಗಿ ಅವ್ಯಕ್ತ ಫರಿಶ್ತಾ ಆಗಿಬಿಡುವಿರಿ, ಆದ್ದರಿಂದ ಅವ್ಯಕ್ತ ವರ್ಷವನ್ನು ಹೇಗೆ ಆಚರಿಸಬೇಕೆಂದು ತಿಳಿಯಿತೇ?

"ಶುಭ ಭಾವನೆ" ಎಂಬುದು ಮನಸಾ ಸೇವೆಯ ಬಹಳ ಶ್ರೇಷ್ಠ ಸಾಧನವಾಗಿದೆ ಹಾಗೂ "ಶ್ರೇಷ್ಠ ಭಾವ ಸಂಬಂಧ ಸಂಪರ್ಕದಲ್ಲಿ ಸರ್ವರ ಪ್ರಿಯರಾಗುವ ಸಹಜ ಸಾಧನವಾಗಿದೆ. ಯಾರು ಸದಾ ಪ್ರತಿಯೊಬ್ಬರ ಪ್ರತಿ ಶ್ರೇಷ್ಠ ಭಾವನೆಯನ್ನು ಧಾರಣೆ ಮಾಡಿಕೊಳ್ಳುತ್ತಾರೆಯೋ ಅವರೇ ಮಾಲೆಯ ಸಮೀಪ ಮಣಿಯಾಗುತ್ತಾರೆ. ಏಕೆಂದರೆ ಮಾಲೆಯು ಸಂಬಂಧ-ಸಂಪರ್ಕದಲ್ಲಿ ಸಮೀಪ ಹಾಗೂ ಶ್ರೇಷ್ಠತೆಯ ಚಿಹ್ನೆಯಗಿದೆ. ಯಾರೇ ಯಾವುದೇ ಭಾವದಿಂದ ಹೇಳಲಿ ಅಥವಾ ನಡೆದುಕೊಳ್ಳಲಿ ಆದರೆ ನೀವು ಸದಾ ಪ್ರತಿಯೊಬ್ಬರ ಪ್ರತಿ ಶುಭ ಭಾವ, ಶ್ರೇಷ್ಠ ಭಾವವನ್ನು ಧಾರಣೆ ಮಾಡಿ. ಯಾರು ಇದರಲ್ಲಿ ವಿಜಯಿ ಆಗುತ್ತಾರೆಯೋ ಅವರೇ ಮಾಲೆಯಲ್ಲಿ ಪೋಣಿಸಲ್ಪಡುವ ಅಧಿಕಾರಿ ಆಗಿದ್ದಾರೆ. ಸೇವೆಯ ಕ್ಷೇತ್ರದಲ್ಲಿ ಭಾಷಣ ಮಾಡಲು ಬರದಿರಲಿ, ಪ್ಲಾನ್ ಮಾಡಲು ಬರದಿರಲಿ ಆದರೆ ಯಾರು ಪ್ರತಿಯೊಬ್ಬರ ಈ ಸಂಬಂಧ ಸಂಪರ್ಕದಲ್ಲಿ ಶುಭ ಭಾವವನ್ನು ಇಟ್ಟುಕೊಂಡರೆ ಆ 'ಶುಭ ಭಾವ' ಸೂಕ್ಷ್ಮ ಸೇವಾ ಭಾವದಲ್ಲಿ ಜಮಾ ಆಗಿ ಬಿಡುತ್ತದೆ. ಇಂತಹ ಶುಭ ಭಾವದವರು ಸದಾ ಎಲ್ಲರಿಗೂ ಸುಖವನ್ನು ಕೊಡುತ್ತಾರೆ ಮತ್ತು ಸುಖವನ್ನೇ ಪಡೆದುಕೊಳ್ಳುತ್ತಾರೆ. ಎಂದ ಮೇಲೆ ಇದೂ ಸಹ ಸೇವೆಯಾಗಿದೆ ಹಾಗೂ ಈ ಸೇವೆಯ ಭಾವ ಮೊದಲ ನಂಬರ್‌ನಲ್ಲಿ ಬರಲು ಅಧಿಕಾರಿಯನ್ನಾಗಿ ಮಾಡುವುದು. ಇದರಿಂದ

ಮಾಲೆಯ ಮಣಿಯಾಗಿ ಬಿಡುವಿರಿ ತಿಳಿಯಿತೇ? ಎಂದಿಗೂ ಈ ರೀತಿ ಯೋಚಿಸಬೇಡಿ - ನಮಗಂತೂ ಭಾಷಣ ಮಾಡಲು ಚಾನ್ಸೇ ಸಿಗುವುದಿಲ್ಲ, ದೊಡ್ಡ ದೊಡ್ಡ ಸೇವೆಯ ಚಾನ್ಸ್ ಸಿಗುವುದಿಲ್ಲ ಆದರೆ ಈ 'ಸೇವಾ ಭಾವ'ದ ಗೋಲ್ಡನ್ ಚಾನ್ಸ್ ತೆಗೆದುಕೊಳ್ಳುವ ಚಾನ್ಸ್‌ಲರ್‌ನ ಲೈನಿನಲ್ಲಿ ಬಂದು ಬಿಡುವಿರಿ ಅರ್ಥಾತ್ ವಿಶೇಷ ಅತ್ಮರಾಗಿ ಬಿಡುವಿರಿ. ಆದ್ದರಿಂದ ಈ ವರ್ಷದಲ್ಲಿ ವಿಶೇಷ "ಶುಭಭಾವನೆ" ಹಾಗೂ "ಶ್ರೇಷ್ಠಭಾವ"ವನ್ನು ಧಾರಣೆ ಮಾಡುವ ಆಟೆನ್ಶನ್ ಇಡಿ.

ಅಶುಭ ಭಾವ ಹಾಗೂ ಭಾವನೆಯನ್ನು ತಮ್ಮ ಶುಭ ಭಾವ ಹಾಗೂ ಶುಭ ಭಾವನೆಯಲ್ಲಿ ಪರಿವರ್ತನೆ ಮಾಡಬಲ್ಲಿರಾ. ಹೇಳಿದ್ದೇವಲ್ಲವೆ - ಗುಲಾಬಿಯ ಪುಷ್ಪವು ದುರ್ವಾಸನೆಯ ಗೊಬ್ಬರದಿಂದ ಸುಗಂಧವನ್ನು ಧಾರಣೆ ಮಾಡಿ ಸುಗಂಧಭರಿತ ಗುಲಾಬಿಯಾಗಬಹುದು. ಎಂದ ಮೇಲೆ ಶ್ರೇಷ್ಠ ಆತ್ಮರಾದ ತಾವು ಅಶುಭ, ವ್ಯರ್ಥ, ಸಾಧಾರಣ ಭಾವನೆ ಹಾಗೂ ಭಾವವನ್ನು ಶ್ರೇಷ್ಠತೆಯಲ್ಲಿ ಬದಲಾವಣೆ ಮಾಡಲು ಸಾಧ್ಯವಿಲ್ಲವೆ? ಅಥವಾ ಹೀಗೆ ಹೇಳುತ್ತೀರೊ - ಏನು ಮಾಡುವುದು ಇವರ ಭಾವನೆಯೇ ಅಶುಭವಾಗಿದೆ. ನನ್ನ ಪ್ರತಿ ಇವರ ಭಾವವೇ ಬಹಳ ಕೆಟ್ಟದ್ದಾಗಿದೆ. ನಾನೇನು ಮಾಡಲಿ? ಹೀಗಂತು ಹೇಳುವುದಿಲ್ಲ ತಾನೆ! ನಿಮ್ಮ ಟೈಟಲ್ಲೇ ಆಗಿದೆ ವಿಶ್ವ ಪರಿವರ್ತಕ. ಯಾವಾಗ ಪ್ರಕೃತಿಯನ್ನು ತಮೋಗುಣಿಯಿಂದ ಸತೋಗುಣಿಯನ್ನಾಗಿ ಮಾಡಬಲ್ಲಿರಿ ಎಂದ ಮೇಲೆ ಆತ್ಮರ ಭಾವ ಹಾಗೂ ಭಾವನೆಯ ಪರಿವರ್ತಕರಾಗಲು ಸಾಧ್ಯವಿಲ್ಲವೇ? ಇದೇ ಲಕ್ಷ್ಯ ತಂದೆಯ ಸಮಾನ ಅವ್ಯಕ್ತ ಫರಿಶ್ತೆಯನ್ನಾಗಿ ಮಾಡುವ ಲಕ್ಷಣವನ್ನು ಸಹಜ ಹಾಗೂ ಸ್ವತಃ ತರಿಸುತ್ತದೆ. ಹೇಗೆ ಅವ್ಯಕ್ತ ವರ್ಷವನ್ನು ಆಚರಣೆ ಮಾಡಬೇಕೆಂದು ತಿಳಿಯಿತೇ. ಆಚರಿಸುವುದು ಅರ್ಥಾತ್ ತಯಾರಾಗುವುದು - ಇದು ಬ್ರಾಹ್ಮಣರ ಭಾಷೆಯ ಸಿದ್ಧಾಂತವಾಗಿದೆ. ಆಗಬೇಕಲ್ಲವೇ. ಅಥವಾ ಕೇವಲ ಆಚರಿಸಬೇಕಾ? ಬ್ರಾಹ್ಮಣರಲ್ಲಿ ವರ್ತಮಾನ ಸಮಯ ಈ ಪುರುಷಾರ್ಥದ ವಿಶೇಷ ಅವಶ್ಯಕತೆ ಇದೆ ಹಾಗೂ ಇದೇ ಸೇವೆ ಮಾಲೆಯ ಮಣಿಯ ಸಮೀಪ ತಂದು ಮಾಲೆಯನ್ನು ಪ್ರಸಿದ್ಧ ಮಾಡುವುದು ಮಾಲೆಯ ಮಣಿಗಳು ಬೇರೆ ಬೇರೆಯಾಗಿ ತಯಾರಾಗುತ್ತಿವೆ. ಆದರೆ ಮಾಲೆ ಅರ್ಥಾತ್ ಮಣಿ ಮಣಿಗಳ ಸಮೀಪತೆ ಈ ಎರಡು ಮಾತುಗಳು ಮಣಿ ಮಣಿಯ ಸಮೀಪತೆಯ ಸಾಧನೆಯಾಗಿದೆ. ಇದಕ್ಕೇ ಹೇಳಲಾಗುತ್ತದೆ ಸುಪುತ್ರ ಅರ್ಥಾತ್ ಸಾಕ್ಷಿ ಕೊಡುವವರು. ಒಳ್ಳೆಯದು!

**ನಾಲ್ಕಾರು ಕಡೆಯ ಸರ್ವ ಸ್ನೇಹದ ಸಾಕ್ಷಿ ಕೊಡುವ ಸುಪುತ್ರ ಮಕ್ಕಳಿಗೆ, ಸದಾ ತಂದೆಯ ಸಮಾನ ಫರಿಶ್ತೆಯಾಗುವ ಉತ್ಸಾಹ-ಉಲ್ಲಾಸದಲ್ಲಿರುವಂತಹ ಆತ್ಮರಿಗೆ, ಸದಾ ಸರ್ವರ ಪ್ರತಿ ಶ್ರೇಷ್ಠ ಭಾವನೆ ಹಾಗೂ ಶ್ರೇಷ್ಠ ಭಾವ ಇಡುವಂತಹ ವಿಜಯೀ ಆತ್ಮರಿಗೆ, ಸದಾ ಪ್ರತಿಯೊಬ್ಬ ಆತ್ಮನನ್ನು ಶ್ರೇಷ್ಠ ಭಾವನೆಯಿಂದ ಪರಿವರ್ತನೆ ಮಾಡುವಂತಹ ವಿಶೇಷ ಪರಿವರ್ತಕ ಅತ್ಮರಿಗೆ, ಸದಾ ವಿಜಯಿಯಾಗಿ ವಿಜಯೀ ಮಾಲೆಯಲ್ಲಿ ಸಮೀಪ ಬರುವಂತಹ ವಿಶೇಷ ರತ್ನಗಳಿಗೆ ಬಾಪ್-ದಾದಾರವರ ಅವ್ಯಕ್ತ ವರ್ಷದ ಶುಭಾಷಯಗಳ ಜೊತೆ ಜೊತೆ ನೆನಪು, ಪ್ರೀತಿ ಹಾಗೂ ನಮಸ್ತೆ.**

**ದಾದಿಯವರೊಂದಿಗೆ ಭೇಟಿ.**

(ದಾದಿ ಜಾನಕೀಜಿಯವರೊಂದಿಗೆ)- ತನ್ನ ಸಾಹಸ ಹಾಗೂ ಸರ್ವರ ಸಹಯೋಗದ ಆಶೀರ್ವಾದ ಶರೀರವನ್ನು ನಡೆಸುತ್ತಿದೆ. ಸಮಯಕ್ಕೆ ಶರೀರವು ಸಹಯೋಗ ಕೊಟ್ಟು ಬಿಡುವುದು. ಎಕ್ಸ್ ಟ್ರಾ ಆಶೀರ್ವಾದದ ಸಹಯೋಗ ಎಂದು ಇದಕ್ಕೆ ಹೇಳಲಾಗುತ್ತದೆ. ವಿಶೇಷ ಆತ್ಮರಿಗೆ ಈ ಅಧಿಕ ಸಹಯೋಗ ಸಿಕ್ಕೇ ಸಿಗುತ್ತದೆ. ಸ್ವಲ್ಪ ಶರೀರಕ್ಕೆ ರೆಸ್ಟ್ ಸಹ ಕೊಡಬೇಕಾಗುತ್ತದೆ. ಒಂದು ವೇಳೆ ಕೊಡುವುದಿಲ್ಲವೆಂದರೆ ಅದು ಕಿಟ್ ಕಿಟ್ ಮಾಡುತ್ತದೆ. ಹೇಗೆ ಅನ್ಯರಿಗೆ ಏನು ಬೇಕೋ ಅದನ್ನು ಕೊಟ್ಟ ಬಿಡುತ್ತೀರಲ್ಲವೇ ಯಾರಿಗೆ ಶಾಂತಿ ಬೇಕು. ಯಾರಿಗೆ ಸುಖ ಬೇಕು. ಯಾರಿಗೆ ಸಹನೆ ಬೇಕು ಅವರಿಗೆ ಕೊಡುತ್ತೀರಲ್ಲವೇ? ಎಂದ ಮೇಲೆ ಶರೀರಕ್ಕೆ ಏನು ಬೇಕೋ ಅದೂ ಸಹ ಕೊಡಿ. ಇದಕ್ಕೂ ಏನಾದರೂ ಬೇಕಲ್ಲವೇ! ಏಕೆಂದರೆ ಈ ಶರೀರವು ಸಹ ಅಮೂಲ್ಯವಾಗಿದೆ. ಇದರ ಸಂಭಾಲಯನ್ನಂತೂ ಮಾಡಬೇಕಾಗುತ್ತದೆ. ಒಳ್ಳೆಯ ಸಾಹಸದಿಂದ ನಡೆಸುತ್ತಿದ್ದೀರಿ. ಮತ್ತು ನಡೆಯಲೇಬೇಕಾಗಿದೆ. ಸಮಯಾನುಸಾರ ಹೇಗೆ ನಿಮ್ಮ ಶರೀರವು ನಿಮಗೆ ಸಹಯೋಗ ಕೊಡುತ್ತದೆಯೋ ಹಾಗೆಯೇ ನೀವು ಕೂಡ ಸ್ವಲ್ಪ ಸಹಯೋಗವನ್ನು ಕೊಟ್ಟುಬಿಡಿ. ನಾಲೆಜ್ ಫುಲ್ಲಂತೂ ಆಗಿದ್ದೀರಿ- ಒಳ್ಳೆಯದು. ಏಕೆಂದರೆ ಈ ಶರೀರದ ಮೂಲಕವೇ ಅನೇಕ ಆತ್ಮರ ಕಲ್ಯಾಣವಾಗಬೇಕಾಗಿದೆ. ಕೇವಲ ನಿಮ್ಮ ಜೊತೆಯ ಅನುಭವದಿಂದಲೇ ಎಲ್ಲರೂ ಬಹಳ ದೊಡ್ಡ ಸಹಯೋಗದ ಅನುಭವ ಮಾಡುತ್ತಾರೆ. ಹಾಜಿರ್ ಆಗುವುದೂ ಸಹ ಸೇವೆಯಲ್ಲಿ ಹಾಜಿರ್ ಆಗಿ 'ಬಿಡುವುದಾಗಿದೆ. ಭಲೇ ಸ್ಥೂಲ ಸೇವೆ ಮಾಡದಿದ್ದರೂ ಹಾಜಿರ್ ಆಗುವುದರಿಂದ ಹಾಜರಾತಿ ಆಗಿ ಬಿಡುವುದು. ಸೆಕೆಂಡ್ ಸಹ ಸೇವೆಯಿಲ್ಲದೇ ಇರಲು ಸಾಧ್ಯವಿಲ್ಲ. ಇರುವುದಿಲ್ಲ. ಆದ್ದರಿಂದ ಸೇವೆಯ ಜಮಾದ ಖಾತೆ ಜಮಾ ಆಗುತ್ತಿದೆ, ಬಹಳ ಒಳ್ಳೆಯ ಪಾತ್ರ ಅಭಿನಯಿಸುತ್ತಿದ್ದೀರಿ, ಅಭಿನಯಿಸುತ್ತಾ ಇರುತ್ತೀರಿ. ಒಳ್ಳೆಯ ಪಾತ್ರ ಸಿಕ್ಕಿದೆಯಲ್ಲವೆ! ಇಷ್ಟು ಒಳ್ಳೆಯ ಪಾತ್ರ ಡ್ರಾಮಾದನುಸಾರ ಆಶೀರ್ವಾದಗಳ ಕಾರಣ ಸಿಕ್ಕಿದೆ! ಈ ಬ್ರಾಹ್ಮಣ ಜನ್ಮದ ಆದಿಯ ಸಂಸ್ಕಾರ 'ದಯಾ ಹೃದಯಿ ಹಾಗೂ 'ಸಹಯೋಗದ ಭಾವನೆ'ಯ ಫಲವಾಗಿದೆ. ತನುವಿನಿಂದ, ಮನಸ್ಸಿನಿಂದ ಆಗಲಿ, ದಯಾ ಹೃದಯಿ ಹಾಗೂ ಸಹಯೋಗದ ಭಾವನೆಯ ಪಾತ್ರ ಆದಿಯಿಂದ ಸಿಕ್ಕಿದೆ. ಆದ್ದರಿಂದ ಅದರ ಫಲ ಸಹಜವಾಗಿ ಪ್ರಾಪ್ತವಾಗುತ್ತಿದೆ. ಶಾರೀರಿಕ ಸಹಯೋಗವು ಸೇವಾ ಭಾವನೆಯಿಂದ, ಹೃದಯದಿಂದ ಮಾಡಿದ್ದೀರಿ. ಆದ್ದರಿಂದ ಶರೀರದ ಆಯಸ್ಸು ಈ ಆಶೀರ್ವಾದಗಳಿಂದ ಹೆಚ್ಚುತ್ತಿದೆ.

**(ದಾದಿಯವರೊಂದಿಗೆ) -** ಒಳ್ಳೆಯದು ಸರ್ವಿಸ್ ಮಾಡಿ ಬಂದಿದ್ದೀರಿ! ಈ ಡ್ರಾಮಾವು ಸಹ ಸಹಯೋಗಿ ಆಗುತ್ತದೆ ಹಾಗೂ ಈ ಶುಭ ಭಾವನೆಯ ಫಲ ಹಾಗೂ ಬಲ ಸಿಗುತ್ತದೆ. ಸಂಘಟಿತ ರೂಪದಲ್ಲಿ ಶುಭ ಭಾವನೆ ಫಲ ಕೊಡುತ್ತದೆ. ಒಳ್ಳೆಯದಾಯಿತು ಹಾಗೂ ಒಳ್ಳೆಯದಕ್ಕಿಂತ ಒಳ್ಳೆಯದೇ ಆಗುವುದಿದೆ. ಈಗಂತೂ ಇನ್ನೂ ಅವ್ಯಕ್ತ ಸ್ಥಿತಿಯ ಮೂಲಕ ವಿಶ್ವದ ಅತ್ಮರಿಗೆ ಹಾಗೂ ಸೇವೆಯಲ್ಲಿ ಮುಂದುವರೆಯಲು ಬಲ ಸಿಗುವುದು. ಕೇವಲ ಬ್ರಾಹ್ಮಣರ ದೃಢ ಪರಿವರ್ತನೆಗಾಗಿ ವಿಶ್ವ ಪರಿವರ್ತನೆ ನಿಂತುಕೊಂಡಿದೆ. ಬ್ರಾಹ್ಮಣರ ಪರಿವರ್ತನೆ ಕೆಲವೊಮ್ಮೆ ಶಕ್ತಿಶಾಲಿಯಾಗಿರುತ್ತದೆ. ಕೆಲವೊಮ್ಮೆ ಹಗುರವಾಗಿರುತ್ತದೆ. ಈ ಏರುಪೇರೂ ಸಹ ಕೆಲವೊಮ್ಮೆ ತೀವ್ರವಾಗಿರುತ್ತದೆ. ಕೆಲವೊಮ್ಮೆ ಸಡಿಲವಾಗಿರುತ್ತದೆ. ಸಂಪನ್ನ ಬ್ರಾಹ್ಮಣರೇ ಆಗುವವರಿದ್ದಾರೆ. ಒಳ್ಳೆಯದು!

**ಚಂದ್ರಮಣಿ ದಾದೀಜಿಯವರೊಂದಿಗೆ** - ಬೇಹದ್ದಿನ ಚಕ್ರವರ್ತಿಯಾಗಿ ಹೋಗಿದ್ದೀರಿ - ಇಂದು ಇಲ್ಲ, ನಾಳೆ ಅಲ್ಲ! ಇದಕ್ಕೆ ಹೇಳಲಾಗುತ್ತದೆ ವಿಶ್ವದ ಆತ್ಮರೊಂದಿಗೆ ಸಹಜವಾಗಿ ಸಂಬಂಧ ಜೋಡಿಸುವುದು. ವಿಶ್ವದ ರಾಜ್ಯ ಮಾಡಬೇಕು, ವಿಶ್ವ ಕಲ್ಯಾಣಕಾರಿಯಾಗಿದ್ದೀರಿ - ಎಂದ ಮೇಲೆ ಮೂಲೆ-ಮೂಲೆಯಲ್ಲಿ ಕಾಲು ಅಂತೂ ಇಡಬೇಕಾಗುತ್ತದೆಯಲ್ಲವೇ. ಇದಕ್ಕಾಗಿ ದೇಶ ವಿದೇಶದಲ್ಲಿ ಚಾನ್ಸ್ ಸಿಗುತ್ತದೆ. ಪ್ರೋಗ್ರಾಂ ಮಾಡದಿದ್ದರೂ ಸಹ ಈ ಡ್ರಾಮಾನುಸಾರ ಸಂಗಮದ ಸೇವೆ ಭವಿಷ್ಯವನ್ನು ಪ್ರತ್ಯಕ್ಷ ಮಾಡುತ್ತಿದೆ. ಆದ್ದರಿಂದ ಬೇಹದ್ದಿನ ಸೇವೆ ಹಾಗೂ ಬೇಹದ್ದಿನ ಸಂಬಂಧ ಸಂಪರ್ಕ ಹೆಚ್ಚುತ್ತಿದೆ ಹಾಗೂ ಹೆಚ್ಚುತ್ತಲೇ ಇರುತ್ತದೆ. ಸ್ಟೇಟ್‌ನ ರಾಜನಂತೂ ಆಗುವಂತಿಲ್ಲ, ವಿಶ್ವದ ರಾಜರಾಗಬೇಕು! ಪಂಜಾಬಿನ ರಾಜನಂತೂ ಆಗುವಂತಿಲ್ಲ! ಆದಂತೂ ನಿಮಿತ್ತ ಡ್ಯೂಟಿ ಆಗಿದೆ. ಡ್ಯೂಟಿ ಎಂದು ತಿಳಿದುಕೊಂಡು ನಿಭಾಯಿಸುತ್ತೀರಿ. ಬಾಕಿ ಆರ್ಡರ್ ಮಾಡಿದರೆ - ಮಧುಬನ ನಿವಾಸಿಯಾಗಿ ಎಂದು ಆಗ - ಪಂಜಾಬ್ ಅನ್ನು ಯಾರು ನೋಡಿಕೊಳ್ಳುತ್ತಾರೆ ಎಂದು ಯೋಚಿಸುತ್ತೀರಾ? ಇಲ್ಲವಲ್ಲ, ಎಲ್ಲಿಯವರೆಗೂ ಎಲ್ಲಿಯ ಯಾವ ಡ್ಯೂಟಿ ಇದೆಯೋ ಅದನ್ನು ಬಹಳ ಒಳ್ಳೆಯ ರೀತಿಯಲ್ಲಿ ನಿಭಾಯಿಸಲೇಬೇಕಾಗಿದೆ.

**ದಾದಿ ಜಾನಕೀಜಿಯವರೊಂದಿಗೆ** - ಈಗ ನೀವು ವಿದೇಶದಿಂದ ಇಲ್ಲಿ ಬಂದು ಬಿಡಿ ಎಂದರೆ ಬಂದು ಕುಳಿತು ಬಿಡುತ್ತೀರಲ್ಲವೆ! ಬಾಬಾರವರು ಕಳುಹಿಸುತ್ತಾರೆ ಆದರೆ ನೀವು ಸ್ವಯಂ ಹೋಗುವುದಿಲ್ಲ. ಕೊನೆಯದಾಗಿ ಎಲ್ಲರೂ ಇಲ್ಲಿಗೆ ಬರಲೇ ಬೇಕಾಗುತ್ತದೆಯಲ್ಲವೇ! ಆದ್ದರಿಂದ ಮತ್ತೆ ಮತ್ತೆ ಬರುತ್ತಾ ಬರುತ್ತಾ ಮತ್ತೆ ಉಳಿದುಕೊಂಡು ಬಿಡುತ್ತಾರೆ. ಚಕ್ಕರ್ ಹಾಕಿಕೊಂಡು ಮತ್ತೆ ಬಂದು ಬಿಡುತ್ತೀರಲ್ಲವೇ! ಆದ್ದರಿಂದ ಭಿನ್ನರೂ ಆಗಿದ್ದೀರಿ ಹಾಗೂ ಸೇವೆಯ ಪ್ರಿಯರು ಆಗಿದ್ದೀರಿ. ದೇಶ ಹಾಗೂ ವ್ಯಕ್ತಿಯರ ಪ್ರಿಯರಲ್ಲ ಆದರೆ ಸೇವೆಯ ಪ್ರಿಯರಾಗಿದ್ದೀರಿ. ಒಳ್ಳೆಯದು! ಎಲ್ಲರಿಗೂ ನೆನಪು ಕೊಡಿ. ಅವ್ಯಕ್ತ ವರ್ಷದ ಶುಭಾಷಯಗಳನ್ನು ಕೊಡಿ.

ರಿವೈಸ್ ಕೋರ್ಸ್ 09-01-1993

***ಅವ್ಯಕ್ತ ವರ್ಷ ಆಚರಿಸುವುದು ಅರ್ಥಾಥ್ ಸುಪುತ್ರರಾಗಿ ತೋರಿಸುವುದು***

ಎಷ್ಟು ಸಾಹಸವಂತರಾಗುತ್ತಿರೋ ಅಷ್ಟು ಪದಮದಷ್ಟು ತಂದೆಯ ಸಹಯೋಗಕ್ಕೆ ಸ್ವತಹವಾಗಿಯೇ ಪಾತ್ರರಾಗುತ್ತೀರಿ. ಹೇಗೆ ತಂದೆಯ ಗಾಯನವೂ ಸದಾ ತಂದೆಯ ಬಂಡಾರ ಭರ್ಪೂರಾಗಿದೆ ಎಂದು ಇದೆಯೋ ಹಾಗೆಯೇ ಸುಪುತ್ರ ಮಕ್ಕಳು ಸದಾ ಸರ್ವರ ಹೃದಯದ ಸ್ನೇಹದ ಆಶೀರ್ವಾದದಿಂದ, ಸರ್ವರ ಸಹಯೋಗದ ಅನುಭೂತಿಗಳಿಂದ, ಸರ್ವಖಜಾನೆಗಳ ಭಂಡಾರದಿಂದ ಬರ್ಪೂರಾಗಿರುತ್ತಾರೆ. ಯಾವುದೇ ಖಜಾನೆಗಳಿಂದ ತಮ್ಮನ್ನು ಖಾಲಿ ಎಂದು ಅನುಭವ ಮಾಡುವುದಿಲ್ಲ. ಸದಾ ತಂದೆಯ ಮಕ್ಕಳಾದ ನಮ್ಮ ಭಂಡಾರದಲ್ಲಿ ಅಪ್ರಾಪ್ತಿಯಾಗದ ಯಾವುದೇ ವಸ್ತು ಇಲ್ಲ ಎಂಬ ಗೀತೆಯು ಮೊಳಗುತ್ತಿರುತ್ತದೆ. ಅವರ ದೃಷ್ಟಿ, ವೃತ್ತಿ, ವೈಬ್ರೇಶನ್ ನಿಂದ, ಮುಖದಿಂದ ಸಂಪರ್ಕದಿಂದ ಸದಾ ಭರ್ಪೂರ್ ಆತ್ಮನ

ಅನುಭವವಾಗುತ್ತದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನ್ನನ ತಂದೆ.

1. ನಾನು ಲಕ್ಷ್ಯದೊಂದಿಗೆ ಲಕ್ಷಣಗಳನ್ನು ಕೂಡ ಧಾರಣೆ ಮಾಡುತ್ತಿದ್ದೇನೆ.

2. ನಾನು ಸರ್ವರ ಹೃದಯದ ಸ್ನೇಹದ ಆಶೀರ್ವಾದಗಳಿಂದ, ಸರ್ವರ ಸಹಯೋಗದ ಅನುಭೂತಿಯಿಂದ, ಸರ್ವ ಖಜಾನೆಗಳ ಬಂಡಾರದಿಂದ ಭರ್ಪೂರ್ ಆಗಿ ಇದ್ದೇನೆ.

3. ನನ್ನ ದೃಷ್ಟಿಯಿಂದ, ವೃತ್ತಿಯಿಂದ, ತರಂಗಗಳಿಂದ, ಮುಖದಿಂದ, ಸಂಪರ್ಕದಿಂದ ಸದಾ ಸರ್ವರಿಗೆ ಭರ್ಪೂರ್ ಆತ್ಮನ ಅನುಭವವಾಗಿದೆ.

4. ನಾನು ಬ್ರಹ್ಮಬಾಬಾರವರನ್ನು ಅನುಸರಿಸುತ್ತಾ ಬಾಬಾ ಮತ್ತು ನಾನು ಎಂಬ ಕಂಬೈನ್ಡ್ ಸ್ವರೂಪವನ್ನು ಸದಾ ಅನುಭವ ಮಾಡುತ್ತಿದ್ದೇನೆ ಮತ್ತು ಎಲ್ಲರಿಗೂ ಮಾಡಿಸುತ್ತಿದ್ದೇನೆ.

5. ನಾನು ಬ್ರಹ್ಮಬಾಬಾರವರ ಸಮಾನವಾಗಿ ಅತೀತವಾಗಿ ಮತ್ತು ಪ್ರಿಯವಾಗಿ ಇದ್ದೇನೆ.

6. ನಾನು ತಂದೆಯಿಂದ ಪಡೆದಿರುವ ಶಕ್ತಿ ಮತ್ತು ಗುಣಗಳ ಪ್ರಾಪ್ತಿಯಿಂದ ನಿರ್ಬಲರನ್ನು ಶಕ್ತಿವಂತರನ್ನಾಗಿ ಮಾಡುತ್ತಿದ್ದೇನೆ.

7. ನನ್ನ ಶ್ರೇಷ್ಠ ಸ್ಥಿತಿಯ ಕಾರಣದಿಂದ ಸರ್ವ ಶಕ್ತಿಗಳು ಮತ್ತು ಸರ್ವ ಗುಣಗಳು ಸಮಯಾನುಸಾರ ಸದಾ ನನಗೆ ಸಹಯೋಗಿಯಾಗಿವೆ.

8. ನನ್ನ ಆತ್ಮಿಕ ಸ್ವರೂಪದಿಂದ ಸರ್ವರ ಪ್ರತಿ ಕಲ್ಯಾಣ ಭಾವನೆ, ಯಾರು ಹೇಗಿದ್ದರೂ ಸ್ನೇಹ ಮತ್ತು ಸಹಯೋಗವನ್ನು ಕೊಟ್ಟು, ಸದಾ ಉಲ್ಲಾಸ ಉತ್ಸಾಹಗಳನ್ನು ಹೆಚ್ಚಿಸುತ್ತಾ ಸದಾ ನನ್ನವರು ಎಂಬ ಸದ್ಭಾವನೆ, ಶುಭ ಭಾವನೆಇಂದ ಇದ್ದೇನೆ.

9. ನಾನು ಪ್ರತಿಯೊಂದು ಆತ್ಮನ ಪ್ರತಿ ಶುಭ ಭಾವನೆ ಮತ್ತು ಶುಭ ಭಾವದಿಂದ ಸಹಜವಾಗಿ ಅವ್ಯಕ್ತ ಸ್ಥಿತಿಯ ಅನುಭವ ಮಾಡಿಕೊಳ್ಳುತ್ತಿದ್ದೇನೆ.

10. ನಾನು ಅಶುದ್ಧ, ವ್ಯರ್ಥ ಮತ್ತು ಸಾಧಾರಣ ಭಾವನೆ ಮತ್ತು ಭಾವವನ್ನು ಶ್ರೇಷ್ಠ ಭಾವನೆ, ಶ್ರೇಷ್ಠ ಭಾವದಲ್ಲಿ ಪರಿವರ್ತನೆ ಮಾಡಿ ಬ್ರಹ್ಮಾ ತಂದೆಯ ಸಮಾನವಾಗಿ ಅವ್ಯಕ್ತ ಫರಿಶ್ತಾ ಆಗಿದ್ದೇನೆ.

11. ನಾನು ಶ್ರೇಷ್ಠ ಭಾವದಿಂದ ನನ್ನ ಸಂಬಂಧ ಸಂಪರ್ಕದಲ್ಲಿ ಬರುವ ಆತ್ಮರಿಗೆ ಪ್ರಿಯವಾಗಿ ಇದ್ದೇನೆ.

12. ನಾನು ಸರ್ವ ಆತ್ಮರೊಂದಿಗೆ ಪ್ರಕೃತಿಯನ್ನು ಕೂಡ ತಮೋಪ್ರಧಾನದಿಂದ ಸತೋಪ್ರಧಾನವಾಗಿ ಮಾಡುವ ವಿಶ್ವ ಪರಿವರ್ತಕನು.

**ಕರ್ಮ ಫಿಲಾಸಫಿ.**

1. ಯಾವ ಕಾರ್ಯದಲ್ಲಾದರೂ ಆ ಕಾರ್ಯದ ಪ್ರತಿ ಅಥವಾ ಕಾರ್ಯ ಮಾಡುವ ವ್ಯಕ್ತಿಯ ಪ್ರತಿ ಶ್ರೇಷ್ಠವಾಗಿ ಇದ್ದರೆ ಆ ಭಾವನೆಯ ಫಲ ಕೂಡ ಸ್ವತಹವಾಗಿ ಶ್ರೇಷ್ಠವಾಗಿಯೇ ಇರುತ್ತದೆ.

2. ಯಾರಾದರೆ ಪ್ರತಿಯೊಬ್ಬರ ಪ್ರತಿ ಶ್ರೇಷ್ಠ ಭಾವನೆಯನ್ನು ಧಾರಣೆ ಮಾಡುತ್ತಾರೆಯೋ ಅವರೇ 108ರ ಮಾಲೆಯಲ್ಲಿ ಸಮೀಪ ಮಣಿಯಾಗಿ ಬರುತ್ತಾರೆ ಏಕೆಂದರೆ 108ರ ಮಾಲೆ ಎಂಬುದು ಸಂಬಂಧ ಸಂಪರ್ಕದಲ್ಲಿ ಸಮೀಪತೆಗೆ ಮತ್ತು ಶ್ರೇಷ್ಠತೆಗೆ ಚಿಹ್ನೆಯಾಗಿದೆ.

3. ಸೇವಾ ಕ್ಷೇತ್ರದಲ್ಲಿ ಉಪನ್ಯಾಸ ಹೇಳದಿದ್ದರೂ, ಫ್ಯಾನ್ಸ್ ತಯಾರು ಮಾಡದೇ ಇದ್ದರೂ, ಸಂಬಂಧ ಸಂಪರ್ಕಗಳಲ್ಲಿ ಪ್ರತಿಯೊಬ್ಬರ ಪ್ರತಿ ಶುಭ ಭಾವನೆಯನ್ನು ಇಟ್ಟಿದ್ದೇ ಆದರೆ ಆ ಶುಭ ಭಾವನೆ ಸೂಕ್ಷ್ಮ ಸೇವೆಯಲ್ಲಿ ಜಮಾ ಆಗುತ್ತದೆ.